ಕಂಡು ತಾನೇ ಹುಡುಕಲು ಪ್ರಾರಂಭಿಸಿದ. ಅವನಿಗೆ ನಿರ್ಮಲ್ ಸಿಕ್ಕಿದಾಗ ಅವನನ್ನು ಗುಟ್ಟಾಗಿ ಮನೆಗೆ ಕರೆದುಕೊಂಡು ಬಂದಿರಿ. ನಂತರ ನಡೆದಿದದ್ದೇ ಅವನ ಕೊಲೆಯ ಪ್ಲಾನ್."

"ನಿಮ್ಮ ಮೂವರ ನಾಟಕ ಬಹಳ ಚೆನಾಗಿತ್ತು. ಇಂಥಾ ಒಂದು ಪ್ಲಾನ್ ಕೇವಲ ಮೂರುದಿನದಲ್ಲಿ ಮಾಡಿರುವುದು ಅದ್ಭುತ! ಹಣ ಕೊಡಲಿಲ್ಲ ಅಂದರೆ ರಾಮ್‌ಲಾಲ್ ಪೊಲೀಸರ ಬಳಿ ಹೋದರೆ, ಅವನಿಗೆ ಆಗಲೇ ಶಿಕ್ಷೆ ಆಗಿದೆ. ಆದರೆ ನೀವು ಮೂವರೂ ಈ ವಯಸ್ಸಿನಲ್ಲಿ ಶಿಕ್ಷೆ ಅನುಭವಿಸಬೇಕು ಅನ್ನೋ ಭಯದಿಂದ ಈ ಪ್ಲಾನ್ ಮಾಡಿದಿರಿ. ಪಾರ್ಟನರ್‌ಗಳ ಗಲಾಟೆ, ಹಣ ತಂದು ಮನೆಯಲ್ಲಿ ಇಡುವುದು, ಅದನ್ನು ದರೋಡೆ ಮಾಡಿಸುವುದು, ಅದರ ಹೆಸರಿನಲ್ಲಿ ರಾಮಲಾಲ್‌ನ ಕೊಲೆ ಎಲ್ಲಾ ಪ್ಲಾನ್‌ನ ಭಾಗವೇ. ನಮಗೆ ಆ ಸಿ.ಸಿ ಟೀವಿಯಲ್ಲಿ ಯಾರೋ ಕಾಣುವಂತೆ ಮಾಡಿ ನಮ್ಮ ದಿಕ್ಕು ತಪ್ಪಿಸಲು ಯತ್ನಿಸಿದಿರಿ. ನಿಮಗೆ ರಾಮ್ ಲಾಲ್‌ನ ಸಾವು ಬೇಕಿತ್ತು. ಬರೀ ಕೊಲೆ ಆದರೆ ನಾವು ಅದರ ಆಳಕ್ಕೆ ಇಳಿಯಬಹುದು ಅನ್ನುವ ಹೆದರಿಕೆಯಿಂದ, ಸಾವು ದರೋಡೆ ಮಾಡುವಾಗ ಆಗಿದ್ದು ಅಂತಾ ಬಿಂಬಿಸಲು ಪ್ರಯತ್ನಿಸಿದಿರಿ. ಎಲ್ಲಾ ಸರಿಯಾಗಿಯೇ ಇತ್ತು. ಆದರೆ ರಾಮಲಾಲ್... ನಿಮ್ಮ ಹಳೆಯ ನಂಬರ್‌ಗೆ ಫೋನ್ ಮಾಡಿ ನಮಗೆ ಒಂದು ಕ್ಲೂ ಬಿಟ್ಟ. ಅದೂ ಅವನ ಅರಿವಿಗೇ ಬಾರದಂತೆ. ಅದನ್ನು ಪಾತಾಳ ಗರಡಿ ಹಾಕಿ ಶೋಧಿಸಿದಾಗ ನಿಮ್ಮ ಹಿಂದಿನ ಪುಟಗಳು ತೆರೆದುಕೊಂಡವು. ಇಷ್ಟೆಲ್ಲಾ ಮಾಡಿದ ನೀವು ಒಂದು ಸಣ್ಣ ತಪ್ಪು ಮಾಡಿದಿರಿ... ನಿಮ್ಮ ಹಳೆಯ ಕೇಸ್‌ನಂತೆಯೇ ಇಲ್ಲಿ ಕೂಡಾ ಅನೇಕ ರೀತಿಯ ಪರ್ಫ್ಯೂಮ್‌ಗಳನ್ನ ಹಾಕಿ, ಶ್ವಾನ ದಳದವರಿಗೂ ಯಾವ ಕ್ಲೂ ಸಿಗದಂತೆ ನೋಡಿಕೊಂಡಿರಿ... ನಿಮ್ಮ ಹಳೆಯ ಮೋಡಸ್ ಒಪೆರಂಡಿ... ಅದು ನಿಮ್ಮ ಮೇಲಿನ ಸಂಶಯ ನಿಜವಾಗಿಸಿತು.

ಇಡೀ ಹಾಲ್‌ನಲ್ಲಿ ನಿಶ್ಯಬ್ದ...

ಮೌನ ಸಮ್ಮತಿಯ ಲಕ್ಷಣ...

ಯಾವುದೇ ಪ್ರತಿಕೂಲ ವಾದಗಳನ್ನು ಮುಂದಿಡಲು ಆಗದೇ ಮೂವರೂ ಮೌನಕ್ಕೆ ಶರಣಾದರು. ಅವರ ಹದಿನಾರು ವರ್ಷದ ಮುಖವಾಡ ಕಳಚಿತ್ತು.

"ಯಾರೂ ಹೆದರಬೇಡಿ ನಾವು ಕೋರ್ಟ್‌ನಲ್ಲಿ ಎದುರಿಸೋಣ."

ಮೌನ ಮುರಿಯುತ್ತಾ ಏರುಧ್ವನಿಯಲ್ಲಿ ನುಡಿದ ಜಯರಾಂ. ಅವನಿಗೂ ಗೊತ್ತಿತು ಅದು ಅಸಾಧ್ಯ ಎಂದು. "ಅದಕ್ಕೆ ಮೊದಲು ನಿಮ್ಮನ್ನು ಅರೆಸ್ಟ್ ಮಾಡುತ್ತಿದ್ದೇವೆ... ಮಿಕ್ಕಿದ್ದು ಕೋರ್ಟ್‌ನಲ್ಲಿ ನೋಡೋಣ... ನಾಳೆ ಭುವನೇಶ್ವರ ಪೊಲೀಸರೂ ಬರುತ್ತಿದ್ದಾರೆ... ಮುಂದಿನ ಹಲವು ವರ್ಷಗಳನ್ನು ಜೈಲಿನಲ್ಲಿ ಕಳೆಯಲು ತಯಾರಾಗಿ ... ರವಿ ಅರೆಸ್ಟ್ ದೆಮ್." ಎಂದು ನಗುತ್ತಾ ಕುರ್ಚಿಯಿಂದ ಎದ್ದ ಧನಂಜಯ.

## ವಾಸುದೇವ ಮೂರ್ತಿ ಪಿ.

ಹುಟ್ಟಿದ ಊರು ಶಿವಮೊಗ್ಗ. ಸಿವಿಲ್ ಎಂಜಿನಿಯರ್ ಆಗಿರುವ ಅವರು ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ. ಇತ್ತೀಚೆಗೆ ಅವರ ಪತ್ತೆದಾರಿ ಕತೆಗಳ ಸಂಕಲನ 'ದಿ ಪರ್ಫೆಕ್ಟ್ ಮರ್ಡರ್' ಪ್ರಕಟವಾಗಿದೆ.